ಸೆಲೆಬ್ರಿಟಿ

■ ಹನಿ



# ಭ್ರಷ್ಟರಿಗೆ ಸಿಂಹಸ್ವಪ್ನ

ಸಂಜೀವ್ ಚತುರ್ವೇದಿ ಅವರಿಗೀಗ 41ರ ಹರೆಯ. (ಬರ್ತ್‌ಡೇ 21.12.1974) ಹರಿಯಾಣ ಕೇಡರ್‌ನ 2002ನೇ ಬ್ಯಾಚಿನ ಈ ಐಎಫ್‌ಎಸ್ ಅಧಿಕಾರಿಗೆ ಪ್ರತಿಷ್ಠಿತ ರಾಮನ್ ಮ್ಯಾಗ್ಸೆಸೆ ಪ್ರಶಸ್ತಿ ಪ್ರಕಟವಾಗಿದೆ. 'ಏಷ್ಯಾದ ನೊಬೆಲ್' ಎಂದೇ ಪರಿಗಣಿತವಾಗಿರುವ ಮ್ಯಾಗ್ಸೆಸೆ ಪ್ರಶಸ್ತಿ ಪಡೆದವರ ಈವರೆಗಿನ ಪಟ್ಟಿಯನ್ನು ನೋಡಿದರೆ, 'ಇದು ಜಗತ್ತಿನ ಅತ್ಯುತ್ತಮ ಪ್ರಶಸ್ತಿಗಳಲ್ಲಿ ಒಂದು' ಎಂದು ನಿಸ್ಸಂಶಯವಾಗಿ ಹೇಳಬಹುದು. 'ಉನ್ನತ ಸರ್ಕಾರಿ ಹುದ್ದೆಯಲ್ಲಿದ್ದೂ ಸರ್ಕಾರದ ಒಳಗೆ ನಡೆಯುವ ಭ್ರಷ್ಟಾಚಾರದ ಪ್ರಕರಣಗಳನ್ನು ನಿರ್ಭಯವಾಗಿ ಬಯಲಿಗೆ ತಂದು, ಭ್ರಷ್ಟಾಚಾರದ ವಿರುದ್ಧ ನಿರಂತರ ಹೋರಾಟ ನಡೆಸುತ್ತಿರುವುದಕ್ಕಾಗಿ' ಸಂಜೀವ್ ಅವರಿಗೆ ಈ ಪ್ರಶಸ್ತಿ ನೀಡಲಾಗಿದೆ.

ಸರ್ಕಾರಿ ಅಧಿಕಾರಿಯೊಬ್ಬ ಭ್ರಷ್ಟಾಚಾರದ ವಿರುದ್ಧ ಹೋರಾಡಿದರೆ ಏನಾಗಬಹುದು? 'ಜನರು ಮೆಚ್ಚಿ ಅಹುದಹುದೆನ್ನಬೇಕು, ಸರ್ಕಾರ ಹಾಡಿ ಹೊಗಳಿ ಸನ್ಮಾನಿಸಬೇಕು' ಎಂದು ನಮ್ಮನಿಮ್ಮಂಥವರು ಬಯಸುವುದು ಸಹಜವೇ. ಆದರೆ ಸಂಜೀವ್ ಚತುರ್ವೇದಿ ತನ್ನ ಪ್ರಾಮಾಣಿಕತೆಯಿಂದಾಗಿ ನೂರೆಂಟು ಕಷ್ಟಗಳನ್ನು ಎದುರಿಸಬೇಕಾಯಿತು. ಕಾಂಗ್ರೆಸ್, ಬಿಜೆಪಿ ಸರ್ಕಾರಗಳೆರಡೂ ಈ ಅಧಿಕಾರಿಯನ್ನು ಫುಟ್‌ಬಾಲ್‌ನಂತೆ ಒದ್ದೋಡಿಸಿದವು! 'ನ ಖಾವೂಂಗಾ, ನ ಖಾನೇ ದೂಂಗಾ' (ನಾನು ತಿನ್ನುವುದಿಲ್ಲ, ತಿನ್ನಲೂ ಬಿಡುವುದಿಲ್ಲ) ಎಂಬ ಈಗಿನ ಪ್ರಧಾನಿಯವರ ಸ್ಲೋಗನ್‌ಅನ್ನೇ ಸಂಜೀವ್ ಕುಲಕರ್ಣಿ ಪುನರುಚ್ಚರಿಸಿದ್ದರು. 'ಅದೇ ನನ್ನ ಅಪರಾಧವಾಯಿತು, ಈಗ ಯಾವ ಹುದ್ದೆಯೂ ಇಲ್ಲದೆ, ಸರಿಯಾದ ಕೆಲಸವಿಲ್ಲದೆ ಖಾಲಿ ಕುಳಿತಿದ್ದೇನೆ' ಎಂದು ಸ್ವತಃ ಸಂಜೀವ್ ಬಹಿರಂಗವಾಗಿ ದುಃಖ ವ್ಯಕ್ತಪಡಿಸಿದ್ದಾರೆ. ತನ್ನನ್ನು ಉತ್ತರಾಖಂಡ ಕೇಡರ್‌ಗೆ ವರ್ಗಾಯಿಸಲು ಕೋರಿ ಸಂಜೀವ್ ಸಲ್ಲಿಸಿರುವ ಅರ್ಜಿ ಪ್ರಧಾನಿ ಕಚೇರಿಯಲ್ಲಿ ದೂಳು ತಿನ್ನುತ್ತಾ ಬಿದ್ದಿದೆ.

ಮೂಲತಃ ಸಂಜೀವ್ ಬಿ.ಟೆಕ್ (ಎಲೆಕ್ಟ್ರಿಕಲ್ ಎಂಜಿನಿಯರಿಂಗ್) ಮುಗಿಸಿದ್ದು ಅಲಹಾಬಾದ್ ಎನ್‌ಐಟಿ ಯಲ್ಲಿ. ತರಬೇತಿಯ ವೇಳೆ ಎರಡು ಚಿನ್ನದ ಪದಕಗಳನ್ನು ಗಳಿಸಿದ್ದರು. ಭಾರತೀಯ ಅರಣ್ಯ ಸೇವೆ (ಐಎಫ್‌ಎಸ್) ಪರೀಕ್ಷೆಯಲ್ಲಿ ಎರಡನೇ ರಾಂಕ್. ಐಎಫ್‌ಎಸ್ ಅಧಿಕಾರಿಯಾದ ಸಂಜೀವ್‌ಗೆ ಮೊದಲ ಪೋಸ್ಟಿಂಗ್ ಸಿಕ್ಕಿದ್ದೇ ಕುರುಕ್ಷೇತ್ರದಲ್ಲಿ. ಅಲ್ಲೇ ಭ್ರಷ್ಟಾಚಾರಿಗಳ ವಿರುದ್ಧ ಇವರ ರಣಕಹಳೆ ಆರಂಭವಾಯಿತು. ಹನ್ಸಿ–ಬುಟಾನಾ ಕಾಲುವೆ ಕಾಮಗಾರಿಯಲ್ಲಿ ದುಡ್ಡು ಲೂಟಿ ಹೊಡೆದ ಮತ್ತು ಸರಸ್ವತಿ ವನ್ಯಜೀವಿ ಅಭಯಾರಣ್ಯದಲ್ಲಿ ಪ್ರಾಣಿಹರಣ ಮಾಡುತ್ತಿದ್ದ ಪ್ರಭಾವಿ ಕಂಟ್ರಾಕ್ಟರುಗಳ ವಿರುದ್ಧ ಸಂಜೀವ್ ಕೇಸುಗಳನ್ನು ದಾಖಲಿಸಿದರು. ಪರಿಣಾಮವಾಗಿ ಕೆಲವೇ ತಿಂಗಳಲ್ಲಿ ಫತೇಹಾಬಾದ್‌ಗೆ ವರ್ಗ ಆಯಿತು. ಮಾತ್ರವಲ್ಲ ಇಲಾಖಾ ತನಿಖೆಯ ನೆಪದಲ್ಲಿ ಸಂಜೀವ್ ಅವರನ್ನು 2007ರಲ್ಲಿ ಸೇವೆಯಿಂದಲೂ ಅಮಾನತು ಮಾಡಲಾಯಿತು. ಸಂಜೀವ್ ಕೋರ್ಟ್ ಮೆಟ್ಟಿಲೇರಿದರು. 2008ರಲ್ಲಿ ಕೋರ್ಟ್ ಸಂಜೀವ್ ವಾದವನ್ನು ಎತ್ತಿಹಿಡಿದಾಗ ಸೇವೆಗೆ ಮರಳಿದರು. ಇಲಾಖಾ ತನಿಖೆ ರದ್ದಾಯಿತು.

ನ್ಯಾಯಾಲಯದ ಸೂಚನೆಯಂತೆ ಸಂಜೀವ್ ಬಯಲಿಗೆಳೆದ ಭ್ರಷ್ಟಾಚಾರದ ಪ್ರಕರಣಗಳನ್ನು ಸೆಂಟ್ರಲ್ ವಿಜಿಲೆನ್ಸ್ ಕಮಿಶನ್ (ಸಿವಿಸಿ)ಗೆ ಒಪ್ಪಿಸಲಾಯಿತು. ಅವರು ಸಿಬಿಐ ತನಿಖೆಗೆ ಶಿಫಾರಸು ಮಾಡಿದರು. ಆದರೆ ಹರಿಯಾಣದ ಕಾಂಗ್ರೆಸ್ ಸರ್ಕಾರ ತನಿಖೆಗೆ ಒಪ್ಪಲಿಲ್ಲ. ಐದು ವರ್ಷಗಳ ಸೇವೆಯಲ್ಲಿ 12 ಸಲ ವರ್ಗಾವಣೆ ಆಯಿತು. ಹಲವು ಸಲ ಪ್ರಾಣ ಬೆದರಿಕೆ ಬಂತು. ಸಂಜೀವ್ ಬಗ್ಗಲಿಲ್ಲ. ಹಿಸ್ಸಾರ್ ಮತ್ತು ಜಜ್ಜಾರ್ ಜಿಲ್ಲೆಗಳಿಗೆ ವರ್ಗಾವಣೆಯಾದಾಗ ಅಲ್ಲಿ ವನಮಹೋತ್ಸವದ ನೆಪದಲ್ಲಿ ಅಧಿಕಾರಿಗಳು ಕೋಟ್ಯಂತರ ರೂಪಾಯಿ ಗುಳುಂ ಮಾಡಿದ್ದನ್ನು ಪತ್ತೆ ಹಚ್ಚಿದರು. ಕೇಸ್ ದಾಖಲಿಸಿದರು. ಭ್ರಷ್ಟರು ಮತ್ತು ಅವರ ಬೆಂಬಲಕ್ಕೆ ನಿಂತ ರಾಜಕಾರಣಿಗಳು ಸಂಜೀವ್ ವಿರುದ್ಧವೇ ಕೇಸ್‌ಗಳನ್ನು ಹೂಡಿದರು. ಆರು ಸಲ ವರ್ಗ, ಮೂರು ಎಫ್‌ಐಆರ್, ನಾಲ್ಕು ಸಲ ವಿಜಿಲೆನ್ಸ್ ತನಿಖೆ, ಅಮಾನತು, ದಂಡ– ಹೀಗೆ ಈತನ ವಿರುದ್ಧವೇ ಪಿತೂರಿಗಳು ನಡೆದವು. ಆದರೆ ಸಂಜೀವ್ ತನ್ನ ಹೋರಾಟವನ್ನು ನಿಲ್ಲಿಸಲಿಲ್ಲ. ಎಲ್ಲಿಗೆ ವರ್ಗ ಮಾಡಿದರೂ ಅಲ್ಲಿ ಹಗರಣಗಳ ಜಾಡು ಹಿಡಿದು, ಜನರ ಗಮನಕ್ಕೆ ತಂದರು. ಭ್ರಷ್ಟರ ವಿರುದ್ಧ ಮೊಕದ್ದಮೆಗಳನ್ನು ದಾಖಲಿಸಿದರು. ಕೊನೆಗೆ ಅರಣ್ಯ ಇಲಾಖೆಯಿಂದಲೇ ಹೊರಕ್ಕೆ ಕಳುಹಿಸಬೇಕೆಂದು ನಿರ್ಧರಿಸಿದ ಕೇಂದ್ರ ಸರ್ಕಾರ ಇವರನ್ನು 2012ರ ಜೂನ್‌ನಲ್ಲಿ ಕೇಂದ್ರ ಸೇವೆಗೆ ವರ್ಗಾಯಿಸಿತು. ಆದರೆ ಪೋಸ್ಟಿಂಗ್ ಕೊಡಲಿಲ್ಲ. ತಮಾಷೆಯೆಂದರೆ ಯಾವ ಇಲಾಖೆಯ ಸಚಿವರೂ ಇವರನ್ನು ಆಯ್ದುಕೊಳ್ಳಲು ಸಿದ್ಧರಿರಲಿಲ್ಲ!

ಕೆಲಸವಿಲ್ಲದೆ ಸಂಜೀವ್ ಸುಮ್ಮನೆ ಕುಳಿತುಕೊಳ್ಳಲಿಲ್ಲ. ಆರ್‌ಟಿಐ ಅರ್ಜಿಗಳ ಮೂಲಕ ಆರೋಗ್ಯ ಇಲಾಖೆಯ ಇನ್ನಷ್ಟು ಹಗರಣಗಳ ಬೆನ್ನು ಹತ್ತಿದರು. ದೀರ್ಘ ಕಾಯುವಿಕೆಯ ಬಳಿಕ ಕೇಂದ್ರ ಸರ್ಕಾರ ಆಲ್ ಇಂಡಿಯಾ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ (ಏಮ್ಸ್)ನಲ್ಲಿ ಮುಖ್ಯ ವಿಜಿಲೆನ್ಸ್ ಅಧಿಕಾರಿಯ ಹುದ್ದೆ ನೀಡಿತು.

ಸಂಜೀವ್ ಅಲ್ಲೂ ತಮ್ಮ ಕೆಲಸ ಶುರು ಮಾಡಿದರು. ಜಂಟಿ ಕಾರ್ಯದರ್ಶಿ ವಿನೀತ್ ಚೌಧರಿ ಮತ್ತು ಐಪಿಎಸ್ ಅಧಿಕಾರಿ ಶೈಲೇಶ್ ಯಾದವ್ ಮೂಗಿನಡಿಯಲ್ಲಿ ನಡೆದ ಭ್ರಷ್ಟಾಚಾರಗಳನ್ನು ಬಯಲಿಗೆ ಎಳೆದರು. ಏಮ್ಸ್‌ನಲ್ಲಿ ಒಟ್ಟು 200 ಭ್ರಷ್ಟಾಚಾರ ಮೊಕದ್ದಮೆಗಳು ದಾಖಲಾಗಿದ್ದು, 78ರಲ್ಲಿ ಮಾತ್ರ ಶಿಕ್ಷೆಯಾಗಿದ್ದವು. 87 ಪ್ರಕರಣಗಳಲ್ಲಿ ಚಾರ್ಜ್‌ಶೀಟ್ ದಾಖಲಾಗಿದ್ದವು. 20 ಪ್ರಕರಣಗಳು ಸಿಬಿಐ ತನಿಖೆಗೆ ಶಿಫಾರಸ್ಸಾಗಿದ್ದವು. ಸಂಜೀವ್ ಎಲ್ಲದರ ಬೆನ್ನು ಹತ್ತಿದರು. ಪರಿಣಾಮ ಸಿವಿಸಿ ಹುದ್ದೆಯಿಂದಲೂ ವರ್ಗಾಯಿಸಲಾಯಿತು. ಸದ್ಯಕ್ಕೆ ಡೆಪ್ಯುಟಿ ಸೆಕ್ರೆಟರಿ. ಆದರೆ ಜವಾಬ್ದಾರಿ ತೋರಿಸಿಲ್ಲ. ದೆಹಲಿಯ ಮುಖ್ಯಮಂತ್ರಿ ಕೇಜ್ರಿವಾಲ್ 'ನಮ್ಮ ಸರ್ಕಾರಕ್ಕೆ ಡೆಪ್ಯುಟೇಶನ್ ಮೇಲೆ ಸ್ಪೆಶಲ್ ಆಫೀಸರ್ ಆಗಿ ಕಳುಹಿಸಿ' ಎಂದು ಕೋರಿದರೂ ಕೇಂದ್ರ ಮಿಸುಕಾಡುತ್ತಿಲ್ಲ. ಹೀಗೆ ಕೆಲಸವಿಲ್ಲದಿರುವಾಗಲೇ ಮ್ಯಾಗ್ಸೆಸೆ ಪ್ರಶಸ್ತಿ ಹುಡುಕಿಕೊಂಡು ಬಂದಿದೆ. ದೇಶಾದ್ಯಂತ ಸಂಜೀವ್ ಬೆಂಬಲಿಗರ ದೊಡ್ಡ ದಂಡೇ ಇದೆ. ಅವರಿಗೆಲ್ಲ ಈ ಪ್ರಶಸ್ತಿ ಸಂಭ್ರಮ ತಂದಿದೆ. ■

Printed and Published by S.V. Srinivasan on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65